ಸಾಕ್ಷಿಯನ್ನು ದಿಃ 24-03-2026 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್ ವಾಯ್ ಕೆ ವಕೀಲರಿಂದ (ವಾದಿಯರ ಪರವಾಗಿ)**

ನನಗೆ 30 ವರ್ಷ ವಯಸ್ಸಾಗಿದೆ. ನನ್ನ ಮುಖ್ಯ ವಿಚಾರಣೆಯಲ್ಲಿ ನನ್ನ ವಯಸ್ಸು ಅಜಮಾಸು 28 ವರ್ಷ ಎಂದು ನಮ್ಮ ತಂದೆ ಬರೆಯಿಸಿದ್ದಾರೆ. ಮುಖ್ಯ ವಿಚಾರಣೆಯನ್ನು ನಾನೇ ಹೇಳಿ ಬರೆಯಿಸಿದ್ದೇನೆ. 2002 ರಲ್ಲಿ ನನಗೆ 7 ವರ್ಷ ವಯಸ್ಸಾಗಿತ್ತು. ಆ ಸಮಯದಲ್ಲಿ ನನಗೆ ವ್ಯವಹಾರ ಜ್ಞಾನ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಪರವಾಗಿ ನನ್ನ ತಂದೆ ವ್ಯವಹಾರ ಮಾಡುತ್ತಿದ್ದರು. ದಾವಾ ಆಸ್ತಿ ಸರ್ವೇ ನಂಬರ 109/3 ಪ್ರತಿವಾದಿ ನಂ.1 ರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಆಸ್ತಿ ಪ್ರತಿವಾದಿ ನಂ.1 ಖರೀದಿಸಿದ ಆಸ್ತಿ ಎಂದು ಹೇಳುತ್ತಾರೆ. ಅವರು ಲಿಂಗನಗೌಡರಿಂದ ಖರೀದಿಸಿದ್ದರು. ನಿಪಿಃ17 ರ ಪ್ರಕಾರ ಸರ್ವೇ ನಂಬರ 109 ಪ್ರತಿವಾದಿ ನಂ.1 ರ ಪಾಲಿಗೆ ಬಂದಿದೆ ಎಂದರೆ ಸರಿ. ಆ ಬಗ್ಗೆ 2180(ನಿಪಿಃ16) ದಾಖಲಾಗಿದೆ ಎಂದರೆ ಸರಿ. ಸರ್ವೇ ನಂ.109/3 1 ನೇ ಪ್ರತಿವಾದಿ ಖರೀದಿಸಿದ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೇ ನಂ.109/3 ನ್ನು ನಮ್ಮ ತಂದೆ ಖರೀದಿಸುವ ಮೊದಲು ಆ ಬಗ್ಗೆ ಜಾಹೀರ ಪ್ರಕಟಣೆ ಹಾಕಿಸಿರಲಿಲ್ಲ ಆದರೆ ಊರಲ್ಲಿ ಹಿರಿಯರನ್ನು ಕೂಡಿಸಿದ್ದರು ಎಂದು ಹೇಳುತ್ತಾರೆ. ಆ ದಿನ ಊರ ಹಿರಿಯರಾದ ನಾಗಪ್ಪ ನಾಯ್ಕರ, ಬಸವಂತಪ್ಪ ಸಾತನ್ನವರ ಹಾಗೂ ಇನ್ನಿಬ್ಬರು ಹಿರಿಯರು ಸೇರಿದ್ದರು ನಮ್ಮ ತಂದೆ ಹೇಳಿದ್ದಾರೆ. ಆ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. 2002 ರಲ್ಲಿ ನಾವು ಖರೀದಿಸಿದ ಆಸ್ತಿ ಎಕರೆ 5-6 ಲಕ್ಷ ಬೆಲೆ ಬಾಳುತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ರೂ.18-20 ಸಾವಿರ ಬೆಲೆ ಬಾಳುತ್ತಿತ್ತು ಎಂದು ಹೇಳುತ್ತಾರೆ. ಆ ಸಮಯದಲ್ಲಿ ಎಕರೆ 18-20 ಸಾವಿರ ಬೆಲೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನನ್ನು ನಮ್ಮ ತಂದೆ ಖರೀದಿಸುವಾಗ 1 ನೇ ಪ್ರತಿವಾದಿಯ ಹೆಂಡತಿಯ ಸಹಿ ಪಡೆದಿಲ್ಲ. ಖರೀದಿ ರಕಂನ್ನು ಬ್ಯಾಂಕ ಮೂಲಕ ಕೊಟ್ಟಿದ್ದೀರಾ ಎಂಬ ಪ್ರಶ್ನೆಗೆ ಹಿರಿಯರ ಸಮಕ್ಷಮ ನಗದು ರೂಪದಲ್ಲಿ ಕೊಡಲಾಗಿದೆ ಎಂದು ಹೇಳುತ್ತಾರೆ. ರೂ. 20 ಸಾವಿರಗಳಿಗಿಂತ ಹೆಚ್ಚಿನ ವ್ಯವಹಾರ ಬ್ಯಾಂಕ ಮೂಲಕ ಆಗಬೇಕೆಂದು ನಿಯಮ ಇದೆ ಎಂದರೆ ಗೊತ್ತಿಲ್ಲ. ಪ್ರತಿವಾದಿ ನಂ.1 ಸರಾಯಿ ಕುಡಿಕನಾಗಿದ್ದಾನೆ ಎಂದರೆ ಸರಿಯಲ್ಲ. ಈಗ ಆತ ಕುಡಿದು ತಿರುಗಾಡುತ್ತಾನೆ ಎಂದರೆ ಗೊತ್ತಿಲ್ಲ. ಪ್ರತಿವಾದಿ ನಂ.1 ಕುಡಿದ ಅಮಲಿನಲ್ಲಿ ತಾನು ಏನು ಮಾಡುತ್ತಿದ್ದಾನೆಂದು ತನಗೆ ಗೊತ್ತಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ

ಪ್ರತಿವಾದಿ ನಂ.1 ರವರಿಗಾಗಲಿ, ಅವರ ಕುಟುಂಬದವರಿಗಾಗಲಿ ಖರೀದಿ ಹಣ ನೀಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ರವರಿಂದ ಕಾನೂನು ಬಾಹಿರವಾಗಿ ನಮ್ಮ ತಂದೆ ಖರೀದಿ ಪತ್ರ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ರವರಿಗೆ ದಾವಾ ಆಸ್ತಿಯನ್ನು ನಮ್ಮ ತಂದೆ ಮಾರಾಟ ಮಾಡುವ ಯಾವುದೇ ಹಕ್ಕಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಗೆ ದಾವಾ ಆಸ್ತಿಯಲ್ಲಿ ಯಾವುದೇ ಮಾಲೀಕತ್ವ ಬಂದಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ನಮ್ಮ ತಂದೆಯಿಂದ ಹಕ್ಕು ಬಿಟ್ಟ ಪತ್ರ ಮಾಡಿಸಿಕೊಂಡ ನನಗೂ ಸಹ ಸದರಿ ಆಸ್ತಿಯಲ್ಲಿ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಎತ್ತು ಹಾಕುವ ಉದ್ದೇಶದಿಂದ ಸುಳ್ಳು ತಕರಾರು ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಸ್ ಎಸ್ ಹೆಚ್ ರವರಿಂದ (ಪ್ರತಿವಾದಿ ನಂ.2 ರ ಪರವಾಗಿ)**

ನಮ್ಮ ತಂದೆ ಆಸ್ತಿ ಖರೀದಿಸಿದ ಖರೀದಿ ಪತ್ರಕ್ಕೆ ಪ್ರತಿವಾದಿ ನಂ.2 ಸಹಿ ಮಾಡಿಲ್ಲ ಎಂದರೆ ಸರಿ. ಅವರ ಒಪ್ಪಿಗೆ ಸಹ ಪಡೆದಿಲ್ಲ ಎಂದರೆ ಖರೀದಿ ಕಾಲಕ್ಕೆ ಪ್ರತಿವಾದಿ ನಂ.1 ಮಾತ್ರ ಮನೆಯ ಹಿರಿತನ ಮಾಡುತ್ತಿದ್ದರು ಹಾಗಾಗಿ ಉಳಿದವರ ಒಪ್ಪಿಗೆ ಪಡೆಯುವ ಅವಶ್ಯಕತೆ ಇರಲಿಲ್ಲ ಎಂದು ಹೇಳುತ್ತಾರೆ. ನಮ್ಮ ತಂದೆ ಕಾನೂನುಬಾಹಿರವಾಗಿ 1 ನೇ ಪ್ರತಿವಾದಿಯಿಂದ ಖರೀದಿ ಪತ್ರ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕಿಲ್ಲದ ಕಾರಣ, ಹಕ್ಕುಬಿಟ್ಟ ಪತ್ರ ಮಾಡಿಸಿಕೊಂಡ ನನಗೂ ಸಹ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ನಾವು ಖರೀದಿಸಿದ ಆಸ್ತಿಯಲ್ಲಿಯೂ ಸಹ 2 ನೇ ಪ್ರತಿವಾದಿಗೆ ಪಾಲು ಇದೆ ಎಂದರೆ ಸರಿಯಲ್ಲ. ಸುಳ್ಳು ತಕರಾರು ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಳಿದ ಪ್ರತಿವಾದಿಯರು ಗೈರು ಹಾಜರಿರುವ ಕಾರಣ ಅವರ ಪರವಾಗಿ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.